# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 8/2025

ಡಬ್ಲ್ಯೂ.ಡಬ್ಲ್ಯೂ-1

**<u>ದಿನಾಂಕ 04.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಸಂಖ್ಯೆ-2 ರವರ ಪರ ಶ್ರೀಮತಿ.ಎಲ್.ಎನ್.ಆರ್. ವಕೀಲರ ಪರವಾಗಿ ಶ್ರೀ.ಎನ್.ಎನ್. ವಕೀಲರಿಂದಃ**

ನಾನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ದಿನಾಂಕಃ15.11.2023 ರಿಂದ ಕೆಲಸ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ಅಲ್ಲಿಂದ ದಿನಾಂಕಃ19.04.2024 ರ ಬೆಳಗಿನ ಜಾವ 05.47 ನಿಮಿಷದ ವರೆಗೆ ಕೆಲಸ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಒಂದು ನೇಮಕಾತಿ ಪತ್ರವನ್ನು ತೋರಿಸಿ ಅದನ್ನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಿಂದ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಸದರಿ ದಾಖಲೆಯಲ್ಲಿ ಇರುವ ಸಹಿಯನ್ನು ತೋರಿಸಿ ಸದರಿ ಸಹಿಯನ್ನು ನಾನೇ ಮಾಡಿರುತ್ತೇನೆ ಎಂದರೆ ಅದರ ಬಗ್ಗೆ ಅನುಮಾನ ಇರುತ್ತದೆ ಎನ್ನುತ್ತಾರೆ. ಸದರಿ ದಾಖಲೆ ಜೊತೆಯಲ್ಲಿ ಇರುವ ಮತ್ತೊಂದು ದಾಖಲೆಯನ್ನು ತೋರಿಸಿ ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ತೋರಿಸಿದಾಗ ಅದರ ಬಗ್ಗೆ ಅನುಮಾನ ಇರುತ್ತದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿ ದಾಖಲೆಗಳಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು Agreement ದಾಖಲೆಯನ್ನು ಮಾಡಿಸಿಕೊಂಡು ಅವರ ಬಳಿಯೇ ಇಟ್ಟುಕೊಂಡಿರುತ್ತಾರೆ ಎನ್ನುತ್ತಾರೆ.

ದಿನಾಂಕಃ15.11.2023 ರಂದು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯವರು ನನಗೆ ನೇಮಕಾತಿ ಪತ್ರವನ್ನು ಕೊಟ್ಟಿದ್ದರು ಸಹಾ ಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ಯಾವ ಆಧಾರದ ಮೇಲೆ ನೀವು ಕೆಲಸಕ್ಕೆ ಸೇರಿಕೊಂಡಿದ್ದೀರ ಎಂದರೆ ನಾನು ಮೊದಲೇ 19 ವರ್ಷಗಳ ಕಾಲ Mac Agency ಯಿಂದ 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಕೆಲಸ ಮಾಡಿದ್ದೆ ಎನ್ನುತ್ತಾರೆ. ನಾನು Mac Agency ಯಲ್ಲಿ ದಿನಾಂಕಃ14.11.2023 ರವರೆಗೆ ಕೆಲಸ ಮಾಡಿದ್ದೆ ಹೊಸದಾಗಿ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ದಿನಾಂಕಃ15.11.2023 ರಿಂದ ದಿನಾಂಕಃ19.04.2024 ರವರೆಗೆ ಕೆಲಸ ಮಾಡಿರುತ್ತೇನೆ ಎಂದರೆ ಸರಿ. ಅದಕ್ಕೆ ಸಂಬಂಧಪಟ್ಟಂತೆ ದಿನಾಂಕಃ15.11.2023 ರ ನೇಮಕಾತಿ ಪತ್ರವನ್ನು ನನಗೆ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಿಂದ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಿ.ಡಬ್ಲ್ಯೂ-1 ರ ದಾಖಲೆ S-MAC ಸಂಸ್ಥೆಗೆ ಸಂಬಂಧಪಟ್ಟ ದಾಖಲೆ ಆಗಿರುತ್ತದೆ ಎಂದರೆ ಸರಿ. ನಿ.ಡಬ್ಲೂ-2 ರ ದಾಖಲೆ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ಸಂಬಂಧಪಟ್ಟ ದಾಖಲೆ ಆಗಿರುತ್ತದೆ ಎಂದರೆ ಸರಿ. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆ ಗುತ್ತಿಗೆದಾರರ ಸಂಸ್ಥೆ ಎಂದರೆ ಸರಿ. ಸದರಿ ಸಂಸ್ಥೆಯವರು ಕಾರ್ಮಿಕರನ್ನು ನೇಮಕಾ ಮಾಡಿಕೊಂಡು ಅವರ clients ಗೆ ಕಳುಹಿಸಿಕೊಡುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನನ್ನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಭದ್ರತಾ ಸಿಬ್ಬಂದಿಯಾಗಿ ನೇಮಕಾ ಮಾಡಿದ್ದರು ಎಂದರೆ ಸರಿ.

ನನ್ನನ್ನು 1 ವರ್ಷದ ಅವಧಿಗೆ ನೇಮಕಾ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಕರಾರು ಪತ್ರವನ್ನು ಪ್ರತಿ ವರ್ಷ ಏಪ್ರಿಲ್ 1 ರಿಂದ ಮುಂದಿನ ವರ್ಷ ಮಾರ್ಚ 31 ರವರೆಗೆ ನಮ್ಮನು ಕೆಲಸಕ್ಕೆ ತೆಗೆದುಕೊಂಡಿದ್ದು ಪ್ರತಿ ವರ್ಷ ಅದನ್ನು ನವೀಕರಣ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನನಗೆ ಸಂಬಂಧಪಟ್ಟ ಕರಾರನ್ನು ದಿನಾಂಕಃ01.04.2024 ರಲ್ಲಿ ನವೀಕರಣ ಮಾಡಿಕೊಳ್ಳಬೇಕಾಗಿತ್ತು ಆದರೆ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಕೆಲಸದ ಅವಧಿ ದಿನಕ್ಕೆ 8 ಗಂಟೆ ಇರುತ್ತದೆ ಆದರೆ ರಾತ್ರಿ ಪಾಳೆ ಆದರೆ 10 ಗಂಟೆಗಳ ಕಾಲ ಇರುತ್ತದೆ ಎನ್ನುತ್ತಾರೆ. ರಾತ್ರಿ ಪಾಳೆಯಲ್ಲಿ ರಾತ್ರಿ 8 ಗಂಟೆಯಿಂದ ಬೆಳಗಿನ ಜಾವ 06.00 ಗಂಟೆ ವರೆಗೆ ಅಂದರೆ 10 ಗಂಟೆ ಕಾಲ ಇರುತ್ತದೆ ಎಂದರೆ ಸರಿ. ದಿನಾಂಕಃ19.04.2024 ರಲ್ಲಿ ನನ್ನ ಕೆಲಸವನ್ನು ನಾನು ಬೆಳಿಗ್ಗೆ 05.47 ನಿಮಿಷಕ್ಕೆ ಬಿಟ್ಟಿರುತ್ತೇನೆ ಎಂದರೆ ಸರಿ. 15 ನಿಮಿಷಗಳ ಕಾಲ ನಾನು ಮುಂಚಿತವಾಗಿ ಕೆಲಸವನ್ನು ಬಿಟ್ಟು ಹೋಗಿದ್ದ ಬಗ್ಗೆ ನನ್ನ ಮೇಲ್ ಅಧಿಕಾರಿಗಳ ಅನುಮತಿಯನ್ನು ನಾನು ಪಡೆದುಕೊಂಡಿಲ್ಲ. ಸಾಕ್ಷಿ ಮುಂದುವರೆದು ನಾನು regular ಸಮಯದಲ್ಲಿ ಕೆಲಸ ಬಿಟ್ಟಿರುವ ಕಾರಣ ಅವರ ಅನುಮತಿ ಪಡೆಯುವ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ಆ ದಿವಸ ನಾನು ನನ್ನ ಪ್ರಭಾರವನ್ನು ಯಾರಿಗೆ ಕೊಟ್ಟು ಹೋಗಿರುತ್ತೇನೆ ಎಂದರೆ ಸಾಕ್ಷಿ ನನಗಿಂತ ಮೇಲ್ ರವರು ಅಂದರೆ ನನ್ನ ಸಹೋದ್ಯೋಗಿ ಇರುತ್ತಾರೆ ಅವರಿಗೆ ನಾನು ಹೇಳಿ ಹೋಗಿರುತ್ತೇನೆ. ನನ್ನ ಮೇಲಿನವರಿಗೆ ತಿಳಿಸಿ ಅವರ ಅನುಮತಿಯನ್ನು ಪಡೆದುಕೊಂಡು ಹೋಗಬೇಕಾಗಿತ್ತು ಎಂದರೆ ಸರಿಯಲ್ಲ.

ನಾನು ಆ ರೀತಿ ಅನುಮತಿಯನ್ನು ಪಡೆಯದೇ ಕೆಲಸ ಬಿಟ್ಟು ಹೋಗಿರುವ ಕಾರಣ ಅದು ನನ್ನ ಕರ್ತವ್ಯ ಲೋಪ ಉಂಟಾಗುತ್ತದೆ ಎಂದರೆ ಸರಿಯಲ್ಲ. ಆಡಳಿತ ವರ್ಗದವರು ನನ್ನ ಒಪ್ಪಿಗೆ ಮೇರೆಗೆ ನನ್ನನ್ನು ರಾತ್ರಿ ಪಾಳೆ ಕೆಲಸಕ್ಕೆ ನಿಯೋಜನೆ ಮಾಡಿರುತ್ತಾರೆ ಎಂದರೆ ಒಪ್ಪಿಗೆ ಪ್ರಶ್ನೆ ಬರುವುದಿಲ್ಲ ಎನ್ನುತ್ತಾರೆ. ನನಗೆ ರಾತ್ರಿ ಪಾಳೆ ಕೆಲಸ ಮಾಡಲು ಒಪ್ಪಿಗೆ ಇಲ್ಲ ಎನ್ನುವ ಬಗ್ಗೆ ಆಡಳಿತ ವರ್ಗಕ್ಕೆ ಪತ್ರ ಬರೆದು ನಾನು ತಿಳಿಸಿರುವುದಿಲ್ಲ. ನಾನು ರಾತ್ರಿ ಪಾಳೆಯಲ್ಲಿ ಕೆಲಸ ಮಾಡಲು ಒಪ್ಪಿಕೊಂಡಿದ್ದೆ ಆದರೂ ಸಹಾ ಈ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 19.04.2024 ರ ಬೆಳಗಿನ ಜಾವ 05.47 ಕ್ಕೆ ನಾನು ಕೆಲಸದಿಂದ ಹೋದ ನಂತರ ನಾನು ಪುನಃ ಕೆಲಸಕ್ಕೆ ನಾನು ಬಂದಿಲ್ಲ ಸರಿಯಲ್ಲ. ನಾನು ಕೆಲಸಕ್ಕೆ ಹಾಜರಾಗಿದ್ದರು

ಕೊಡ ನನಗೆ ಕೆಲಸ ಕೊಟ್ಟಿಲ್ಲ ಎಂದು ಹೇಳಿ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ಯಾವುದೇ ಪತ್ರ ಕೊಟ್ಟಿಲ್ಲ ಎಂದರೆ ಸಾಕ್ಷಿ ನನಗೆ ದೂರವಾಣಿ ಮೂಲಕ ಬರಬೇಡಿ ಎಂದು ಹೇಳಿದ್ದರು ಆದ್ದರಿಂದ ನಾನು ಹೋಗಿಲ್ಲ ಎಂದು ಹೇಳುತ್ತಾರೆ. ಆ ಸಂಬಂಧ ನಾನು ಸಂಸ್ಥೆ ಜೊತೆ ಯಾವುದೇ ಪತ್ರ ವ್ಯವಹಾರ ಮಾಡಿಲ್ಲ.

ರಾಜು ಮತ್ತು ಅನಂತರಾಜು ಎನ್ನುವ ಭದ್ರತಾ ಸಿಬ್ಬಂದಿಗಳು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಾರೆ. ಸದರಿ ರಾಜು ಮತ್ತು ಅನಂತರಾಜು ರವರು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಬಂಧಪಟ್ಟವರಲ್ಲ ಎಂದರೆ ಸರಿ. ಸದರಿ ಕಾರ್ಮಿಕರು ನನಗೆ ತೊಂದರೆ ಕೊಟ್ಟಿರುವ ಬಗ್ಗೆ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ನಾನು ತಿಳಿಸಿರುವುದಿಲ್ಲ. ಸದರಿ ಈ ವಿಚಾರವನ್ನು ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಗೆ ತಿಳಿಸಿಲ್ಲ. ಆ ರೀತಿ ಯಾವುದೇ ಘಟನೆ ನಡೆಯದಿದ್ದರೂ ಸಹಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಿನಾಂಕಃ19.04.2024 ರಿಂದ ಕೆಲಸಕ್ಕೆ ಬರದೇ ನಾನು ನನ್ನ ಕೆಲಸವನ್ನು ತೊರೆದಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯ ನಿಯಮಗಳ ಪ್ರಕಾರ ನಾನು ಕೆಲಸಕ್ಕೆ ಹಾಜರಾಗಿಲ್ಲವಾದಾಗ ಅವರಿಗೆ ರಜೆ ಅರ್ಜಿಯನ್ನು ಕೊಟ್ಟು ರಜೆಯನ್ನು ಮಂಜೂರು ಮಾಡಿಸಿಕೊಳ್ಳಬೇಕಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದ ಖಂಡಿಕೆ 4 ರಲ್ಲಿ ಘಟನೆಯ ಬಗ್ಗೆ S-Mac ಸಂಸ್ಥೆಯ ಬೋಪಯ್ಯ ರವರಿಗೆ ತಿಳಿಸಿದ್ದೆ ಎಂದರೆ ಘಟನೆ ಎನ್ನುವುದು ಸರಿಯಲ್ಲ ಎನ್ನುತ್ತಾರೆ. ಮೇಲೆ ಹೇಳಿದ ರಾಜು ಮತ್ತು ಅನಂತರಾಜು ರವರು ನನಗೆ ಬೈದಿದ್ದ ವಿಚಾರವನ್ನು ಸದರಿ ಬೋಪಯ್ಯ ರವರಿಗೆ ತಿಳಿಸಿದ್ದೆ ಎಂದರೆ ಸರಿಯಲ್ಲ. ಆ ರೀತಿ ಯಾವುದೇ ಘಟನೆ ನಡೆದಿಲ್ಲ, ನಾನು ಯಾರಿಗೂ ತಿಳಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಪ್ರಮಾಣ ಪತ್ರದ ಖಂಡಿಕೆ 4 ರಲ್ಲಿ ತಿಳಿಸಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ದಿನಾಂಕಃ 19.04.2024 ರಂದು S-Mac ಸಂಸ್ಥೆಯವರು ನನ್ನ ಮಾಲೀಕರಾಗಿರಲ್ಲಿ ಎಂದರೆ ಸರಿ. ಬೋಪಯ್ಯ ರವರು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ಸಂಬಂಧಪಟ್ಟ ವ್ಯಕ್ತಿ ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಕೆಲಸ ಮಾಡುವ ಸ್ಥಳಕ್ಕೆ ಅವರಿಗೆ ಅಧಿಕಾರ ಇರುತ್ತದೆ ಎನ್ನುತ್ತಾರೆ. ಆದ್ದರಿಂದ ಬೋಪಯ್ಯ ರವರು ನಾನು ಕೆಲಸಕ್ಕೆ ಬರಬೇಡಿ ಎಂದು ಹೇಳಿದ್ದರೂ ಕೂಡ ಅದಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ03.05.2024 ರಲ್ಲಿ ಕಾರ್ಮಿಕ ಅಧಿಕಾರಿಗಳಿಗೆ ಒಂದು ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮನವಿ ಪತ್ರದಲ್ಲಿ ನನ್ನನ್ನು ಕೆಲಸದಿಂದ ಯಾವತ್ತು ತೆಗೆದಿರುತ್ತಾರೆ ಎಂಬ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೆಲಸಕ್ಕೆ ಬರಬೇಡಿ ಎಂದು ಕೆಲಸ ನಿಲ್ಲಿಸಿರುತ್ತಾರೆ. ನನ್ನನ್ನು ಯಾವ ದಿನಾಂಕದಂದು ಕೆಲಸ ನಿರಾಕರಣೆ ಮಾಡಿರುತ್ತಾರೆ ಎನ್ನುವುದರ ಬಗ್ಗೆ ಎಲ್ಲೂ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ-2 ರವರ ದಿನಾಂಕಃ 03.05.2024 ರಂದು ನಾನು ಏನು ಮನವಿ ಕೊಟ್ಟಿದೆ ಆ ದಿವಸ ನನ್ನನ್ನು ಕೆಲಸದಿಂದ ತೆಗೆದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಸದರಿ ಮನವಿ ಪತ್ರವನ್ನು ಕಾರ್ಮಿಕ ಅಧಿಕಾರಿಗಳು ಸದರಿ ಮನವಿಯೂ ತಮ್ಮ ಪರದಿಯಲ್ಲಿ ಬರುವುದಿಲ್ಲ ಎಂದು ಹೇಳಿ ಕಾರ್ಮಿಕ ಉಪ ಆಯೂಕ್ತರು ರವರಿಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವರ್ಗಾವಣೆ ಮಾಡಿರುತ್ತಾರೆ ಆದರೆ ಸರಿ ಇಲ್ಲ ಎಂದು ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ಒಂದು ಹಟಮಾರಿ ತನದಿಂದ ಸದರಿ ಸಂದಾನ ವಿಫಲಗೊಂಡಿತ್ತು ಎಂದರೆ ಸರಿಯಲ್ಲ. ದಿನಾಂಕಃ 22.02.2024 ರಂದು ನಾನು ನನ್ನ ಮೇಲ್ ಅಧಿಕಾರಿಗಳ ಸೂಚನೆಯನ್ನು ಪಾಲಿಸದೆ ನಡೆದುಕೊಂಡಿದ್ದೆ ಎಂದು ನನ್ನ ಮೇಲೆ ಫಿರ್ಯಾದು ಮಾಡಿದ್ದರು ಎಂದರೆ ಸರಿಯಲ್ಲ.

ಅದಕ್ಕೆ ಸಂಬಂಧಪಟ್ಟಂತೆ ದಿನಾಂಕಃ23.02.2024 ರಂದು ನನಗೆ ಕಾರಣ ಕೇಳಿ ನೋಟಿಸ್ ಅನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಅದಕ್ಕೆ ನಾನು ದಿನಾಂಕಃ 13.03.2024 ರಂದು ಕ್ಷಮಾಪಣೆ ಪತ್ರ ಬರೆದುಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ನಿರಾಕರಿಸಿರುತ್ತಾರೆ. ನಿ.ಡಬ್ಲ್ಯೂ-3 ರ ದಾಖಲೆಯಲ್ಲಿ ಏನು ಬರೆದಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಇದಕಿಂತ ಮೊದಲೂ ಸಹಾ ಕರ್ತವ್ಯ ಲೋಪ ಮಾಡಿ ಕ್ಷಮಾಪಣೆ ಪತ್ರ ಕೊಟ್ಟಿರುತ್ತೇನೆ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಡಬ್ಲ್ಯೂ-5 ರಂತೆ ನನಗೆ ದಿನಾಂಕಃ19.07.2024 ರಂದು ಪುನಾಗೆ ವರ್ಗಾವಣೆ ಮಾಡಿದ್ದರು ಎಂದರೆ ಸರಿ. ಸದರಿ ವರ್ಗಾವಣೆ ಪತ್ರದ ಪ್ರಕಾರ ನಾನು ಪುನಾಗೆ ಹೋಗಿ ಕೆಲಸಕ್ಕೆ ಸೇರಿಕೊಂಡಿಲ್ಲ. ಆ ರೀತಿ ನಾನು ಕೆಲಸಕ್ಕೆ ಹೋಗಲು ಆಗುವುದಿಲ್ಲ ಎನ್ನುವುದರ ಬಗ್ಗೆ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆ ರವರಿಗೆ ಯಾವುದೇ ಪತ್ರವನ್ನು ಬರೆದುಕೊಟ್ಟಿಲ್ಲ. ನಿ.ಡಬ್ಲ್ಯೂ-5 ರ ದಾಖಲೆಯನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತಾರೆ ಎಂದರೆ ಇಲ್ಲ ಎಂದು ಉತ್ತರಿಸಿರುತ್ತಾರೆ. ನ್ಯಾಯಾಲಯದಲ್ಲಿ ಸದರಿ ದಾಖಲೆಯನ್ನು ಪ್ರಶ್ನೆ ಇರಲಿಲ್ಲ ಎಂದರೆ ತೊಂದರೆ ಇತ್ತು ಎನ್ನುತ್ತಾರೆ. ಏನು ತೋಂದರೆ ಇತ್ತು ಎಂದರೆ ಪ್ರಕರಣ ನಡೆಯುತ್ತಿತ್ತು ಹಾಗೂ ಮಗುವನ್ನು ನೋಡಿಕೊಳ್ಳಬೇಕಾಗಿತ್ತು ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**